PES IAMS

ಪಿಇಎಸ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
(ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ)
ಎನ್ ಹೆಚ್ 206, ಸಾಗರ ರಸ್ತೆ, ಶಿವಮೊಗ್ಗ – 577 204 (ಕರ್ನಾಟಕ)

Phone: 8147053084
8147053085

**PES Institute of Advanced Management Studies**
(Affiliated to Kuvempu University, Recognized by Govt. of Karnataka)
N H-206, Sagar Road, Shivamogga - 577 204 (Karnataka)

email : principaliams@pestrust.edu.in
: pesiams@pestrust.edu.in
Website : pestrust.edu.in/pesiams

No.

Date: 30-03-2020

**To: The Management**
PES Trust (R)
Shivamogga

**Through: Chief Coordinator Administration**

**Sub: Request for approval of sanctioned posts for the AY 2020-21 (Odd and Even semester) against to the total workload as per norms – Reg.**

Respected Madam/Sir,

With reference to the above subject I would like to request you to sanction the following teaching faculty for the AY 2020-21 (Odd and Even semester) against to the workload as per the norms. The Workload of B.Com/BBA/M.Com is 400 hours; Workload of Computer Science is 457 hours; Physics workload is 38 hours; Mathematics workload is 42 hours; English workload 64 hours; Kannada workload 64 hours and Hindi workload 32 hours. Hence, the following teaching faculty members are required for AY 2020-21(Odd and Even semester):

| Name of the Post | Number of Posts |
|---|---|
| Principal | 01 |
| Coordinator - M.Com | 01 |
| HOD – BBA/B.Com | 01 |
| Faculty – Commerce and Management | 10 |
| HOD – Computer Science | 01 |
| Faculty – Computer Science | 09 |
| Faculty – Physics | 01 |
| Faculty – Mathematics | 01 |
| Faculty – English | 02 |
| Faculty – Kannada | 02 |
| Faculty – Hindi | 01 |
| **Total Teaching Faculty Required for the AY 2020-21 (Odd and Even semester)** | **30** |

I once again request you to sanction the above teaching faculty posts.

Thanking you,

K. Sailatha 30/3/2020

Yours sincerely,

**Principal**
PES Institute of Advanced Management Studies
NH 206, Sagar Road
SHIVAMOGGA-577 204,

For Prerana Educational & Social Trust

S. Y. Arunadevi

Authorised Signatories

PES IAMS
ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್
(ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ)
ಎನ್ ಹೆಚ್ 206, ಸಾಗರ ರಸ್ತೆ, ಶಿವಮೊಗ್ಗ – 577 204 (ಕರ್ನಾಟಕ)
Phone: 8147053084
8147053085
PES Institute of Advanced Management Studies
(Affiliated to Kuvempu University, Recognized by Govt. of Karnataka)
email : principaliams@pestrust.edu.in
: pesiams@pestrust.edu.in
Website : pestrust.edu.in/pesiams
N H-206, Sagar Road, Shivamogga - 577 204 (Karnataka)

No.

Date: 30-03-2019

**To: The Management**
PES Trust (R)
Shivamogga

**Through: Chief Coordinator Administration**

**Sub: Request for approval of sanctioned posts for the AY 2019-20 (Odd and Even semester) against to the total workload as per norms – Reg.**

Respected Madam/Sir,

With reference to the above subject I would like to request you to sanction the following teaching faculty for the AY 2019-20 (Odd and Even semester) against to the workload as per the norms. The Workload of B.Com/BBA/M.Com is 382 hours; Workload of Computer Science is 443 hours; Physics workload is 20 hours; Mathematics workload is 32 hours; English workload 64 hours; Kannada workload 64 hours and Hindi workload 32 hours. Hence, the following teaching faculty members are required for AY 2019-20 (Odd and Even semester):

| Name of the Post | Number of Posts |
|---|---|
| Principal | 01 |
| Coordinator - M.Com | 01 |
| HOD – BBA/B.Com | 01 |
| Faculty – Commerce and Management | 10 |
| HOD – Computer Science | 01 |
| Faculty – Computer Science | 09 |
| Faculty – Physics | 01 |
| Faculty – Mathematics | 01 |
| Faculty – English | 02 |
| Faculty – Kannada | 02 |
| Faculty – Hindi | 01 |
| **Total Teaching Faculty Required for the AY 2019-20 (Odd and Even semester)** | **30** |

I once again request you to sanction the above teaching faculty posts.

Thanking you,

K. Sailatha 30/3/2019

Yours sincerely,
**Principal**
PES Institute of Advanced Management Studies
NH 206, Sagar Road
SHIVAMOGGA-577 204.

For Prerana Educational & Social Trust
S.Y. Arun...
Authorised Signatories

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ನೇವಿ-I/ಅಉಆ/19/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:03.06.2019.

## ಸುತ್ತೋಲೆ

ವಿಷಯ: 2019-20ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರುಗಳ ಆಯ್ಕೆ ಪ್ರಕ್ರಿಯೆ ಕುರಿತು.

ಉಲ್ಲೇಖ: ಇದೇ ಸಮಸಂಖ್ಯೆ ಕಡತದಲ್ಲಿ ಸರ್ಕಾರವು ನೀಡಿರುವ ಅನುಮೋದನೆ.

* * * * * * *

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಉಪನ್ಯಾಸಕರಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಪ್ರತಿ ವರ್ಷ ತಾತ್ಕಲಿಕವಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದ್ದು, ಪ್ರಸ್ತುತ 2019-20ನೇ ಶೈಕ್ಷಣಿಕ ಸಾಲಿನಲ್ಲಿಯೂ ಸಹ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ **ಆನ್‌ಲೈನ್(Online)** ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಅತಿಥಿ ಉಪನ್ಯಾಸಕರನ್ನು ಪಾರದರ್ಶಕವಾಗಿ ಆಯ್ಕೆ ಮಾಡಿಕೊಳ್ಳುವುದು.

**ಅತಿಥಿ ಉಪನ್ಯಾಸಕರನ್ನು ಆಯ್ಕೆಮಾಡಿಕೊಳ್ಳುವ ಪೂರ್ವದಲ್ಲಿ (ಕಾರ್ಯಭಾರ ಲೆಕ್ಕಹಾಕುವಾಗ) ಪ್ರಾಂಶುಪಾಲರು ಅನುಸರಿಸಬೇಕಾದ ಮಾರ್ಗಸೂಚಿಗಳು;**

1) ಬಿ.ಎ, ಬಿ.ಕಾಂ ಹಾಗೂ ಬಿ.ಬಿ.ಎಂ, ವಿಷಯಗಳನ್ನು ಬೋಧಿಸುವ ಖಾಯಂ ಸಹ/ಸಹಾಯಕ ಪ್ರಾಧ್ಯಾಪಕರು ವಾರಕ್ಕೆ 16 ಗಂಟೆ ಮತ್ತು ಪ್ರಾಯೋಗಿಕ ತರಗತಿಯನ್ನು ಹೊಂದಿರುವ ವಿಜ್ಞಾನ ವಿಷಯವನ್ನು ಬೋಧಿಸುವ ಪ್ರಾಧ್ಯಾಪಕರು ವಾರಕ್ಕೆ 20 ಗಂಟೆ ಬೋಧನಾ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ.

2) ಆಯ್ಕೆಗೊಂಡ ಅತಿಥಿ ಉಪನ್ಯಾಸಕರು ಬಿ.ಎ. ಬಿ.ಕಾಂ, ಹಾಗೂ ಬಿ.ಬಿ.ಎಂ, ವಿಷಯಗಳನ್ನು ವಾರಕ್ಕೆ ಕನಿಷ್ಠ 4 ಗಂಟೆಯಿಂದ ಗರಿಷ್ಠ 8 ಗಂಟೆ ಹಾಗೂ ವಿಜ್ಞಾನ ವಿಷಯವನ್ನು ವಾರಕ್ಕೆ ಕನಿಷ್ಠ 5 ಗಂಟೆಯಿಂದ ಗರಿಷ್ಠ 10 ಗಂಟೆ ಬೋಧನಾ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ.

3) ಪ್ರತಿ ಕೋರ್ಸ್‌ನಲ್ಲಿ ಹಾಗೂ ಐಚ್ಛಿಕ ಸಮೂಹ ವಿಷಯಗಳಲ್ಲಿ ಕನಿಷ್ಟ 15 ವಿದ್ಯಾರ್ಥಿಗಳಿಗಿಂತ ಕಡಿಮೆ ಪ್ರವೇಶಾತಿ ಆದಲ್ಲಿ ಅಂತಹ ಕೋರ್ಸ್‌ಗಳಿಗೆ/ಐಚ್ಛಿಕ ಸಮೂಹಕ್ಕೆ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿಕೊಳ್ಳದಂತೆ ಹಾಗೂ ಅಂತಹ ಕೋರ್ಸ್/ಕಾಂಬಿನೇಷನ್‌ಗಳನ್ನು ಪ್ರಾರಂಭಿಸದಿರುವಂತೆ/ಮುಂದುವರೆಸದಿರುವಂತೆ ಪ್ರಾಂಶುಪಾಲರು ಕಟ್ಟು ನಿಟ್ಟಿನ ಕ್ರಮವಹಿಸತಕ್ಕದ್ದು. ಈ ಬಗ್ಗೆ ಪ್ರವೇಶಾತಿ ಸಮಯದಲ್ಲೇ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿ ಅವರಿಂದ ಮುಚ್ಚಳಿಕೆ ಪತ್ರ ಪಡೆಯತಕ್ಕದ್ದು.

K. Sailatha

Principal
PES Institute of Advanced Management Studies
NH 206, Sagar Road
SHIVAMOGGA-577 204



ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಶಿವಮೊಗ್ಗ-577203

4) ಬಿ.ಎ, ಬಿಕಾಂ, ಹಾಗೂ ಬಿ.ಬಿ.ಎಂ, ಭಾಷಾ ಹಾಗೂ ಐಚ್ಚಿಕ ವಿಷಯಗಳ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 99 ಕ್ಕಿಂತ ಅಧಿಕವಾದಾಗ ಹಾಗೂ ಬಿಎಸ್ಸಿ, ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 66 ಕ್ಕಿಂತ ಅಧಿಕವಾದಾಗ ಮತ್ತು Computer Fundamental, ಭಾರತ ಸಂವಿಧಾನ ಮತ್ತು ಪರಿಸರ ಅಧ್ಯಯನ ತರಗತಿಗಳಲ್ಲಿ 100ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಇದ್ದಲ್ಲಿ ಮಾತ್ರ ಹೆಚ್ಚುವರಿ 2 ನೇ ವಿಭಾಗಗಳನ್ನು ತೆರೆಯುವುದು ಹಾಗೂ ಅದರನ್ವಯ ಕಾರ್ಯಭಾರವನ್ನು ಗಣನೆಗೆ ತೆಗೆದುಕೊಳ್ಳುವುದು.ಕೊಠಡಿಗಳ ಸಾಮರ್ಥ್ಯ ಕಡಿಮೆ ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ, ಎರಡನೇ ವಿಭಾಗ ತೆರೆಯಲು ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಪೂರ್ವಾನುಮತಿ ಪಡೆದ ನಂತರ ಕ್ರಮವಹಿಸುವುದು.

5) ವಿಜ್ಞಾನ ವಿಷಯಗಳ ಪ್ರಾಯೋಗಿಕ ತರಗತಿಗಳ ಕಾರ್ಯಭಾರವನ್ನು ಲೆಕ್ಕ ಹಾಕುವಾಗ ಪ್ರತಿ ಬ್ಯಾಚಿಗೆ ಕನಿಷ್ಠ 19(15+4) ವಿದ್ಯಾರ್ಥಿಗಳು ಇರತಕ್ಕದ್ದು. ಮತ್ತು ಅಂತಹ ಒಂದು ಬ್ಯಾಚಿಗೆ ಒಬ್ಬ ಉಪನ್ಯಾಸಕರು ಮಾತ್ರ ಕಾರ್ಯ ನಿರ್ವಹಿಸತಕ್ಕದ್ದು. ವಿದ್ಯಾರ್ಥಿಗಳ ಸಂಖ್ಯೆ 19 ರಿಂದ 30ರ ವರೆಗೆ ಇದ್ದಲ್ಲಿ ಮಾತ್ರ ಆ ಬ್ಯಾಚಿಗೆ ಎರಡು ಉಪನ್ಯಾಸಕರು ಕಾರ್ಯ ನಿರ್ವಹಿಸತಕ್ಕದ್ದು. (ವಿಶ್ವ ವಿದ್ಯಾಲಯಗಳ ಅಧಿಸೂಚನೆಗಳನ್ವಯ ಬ್ಯಾಚ್‌ಗಳನ್ನು ರಚಿಸುವಾಗ ಹಾಗೂ ಅದಕ್ಕೆ ಸಂಬಂಧಿಸಿದಂತೆ ಉಪನ್ಯಾಸಕರಿಗಳಿಗೆ ಕಾರ್ಯಭಾರ ನಿಗಧಿ ಮಾಡುವಾಗಲೂ ಈ ಅಂಶವನ್ನೇ ಪರಿಗಣಿಸಬೇಕು.) ಕಾರಣಾಂತರಗಳಿಂದ 19 ವಿದ್ಯಾರ್ಥಿಗಳಿಗಿಂತಲೂ ಕಡಿಮೆ ಸಂಖ್ಯೆಯ ಬ್ಯಾಚ್‌ಗಳನ್ನು ರಚಿಸಬೇಕಾದ ಸಂದರ್ಭದಲ್ಲಿ ಸೂಕ್ತ ದಾಖಲೆಗಳನ್ನು ಒದಗಿಸಿ, ಪ್ರಾದೇಶಿಕ ಜಂಟಿ ನಿರ್ದೇಶಕರಿಂದ ಪೂರ್ವಾನುಮತಿ ಪಡೆದು ನಂತರ ಕ್ರಮವಹಿಸುವುದು.

6) ಖಾಯಂ ಉಪನ್ಯಾಸಕರುಗಳಿಗೆ ನಿಗದಿತ ಕಾರ್ಯಭಾರ ಹಂಚಿದ ನಂತರ ಉಳಿಕೆ ಇರುವ ಕಾರ್ಯಭಾರವು ಕನಿಷ್ಠ 04 ಗಂಟೆ ಇದ್ದಲ್ಲಿ ಮಾತ್ರ ಸದರಿ ಕಾರ್ಯಭಾರದ ಎದುರು ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು, ಖಾಯಂ ಉಪನ್ಯಾಸಕರು ಒಬ್ಬರೇ ಇದ್ದಾಗ ಅವರಿಗೆ ನಿಗಧಿಪಡಿಸಿರುವ ಕಾರ್ಯಭಾರದ ಜೊತೆಗೆ ಅವರೇ 03 ಗಂಟೆ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸತಕ್ಕದ್ದು. (ನಿರ್ವಹಿಸುವ 03 ಗಂಟೆಗಳ ಕಾರ್ಯಭಾರವನ್ನು ಸರಿದೂಗಿಸಲು ಅವರುಗಳಿಗೆ ಟ್ಯೂಟೋರಿಯಲ್ ಕಾರ್ಯಭಾರದಲ್ಲಿ 02 ಗಂಟೆಗಳು ಹಾಗೂ ಆಡಳಿತಾತ್ಮಕ ಕಾರ್ಯಭಾರದಲ್ಲಿ 01 ಗಂಟೆಗಳನ್ನು ವಿನಾಯಿತಿ ನೀಡಬಹುದು).

7) ಕಾಲೇಜಿನಲ್ಲಿ ಲಭ್ಯವಾಗುವ ಕಾರ್ಯಭಾರವನ್ನು ನಿಯಮಾನುಸಾರ ಲೆಕ್ಕ ಹಾಕಿದ ನಂತರ ಹಾಲಿ ಜಾರಿಯಲ್ಲಿರುವ ನಿಯಮಗಳನ್ವಯ ಖಾಯಂ ಉಪನ್ಯಾಸಕರುಗಳಿಗೆ ಬಿ.ಎ. ಬಿ.ಕಾಂ. ಹಾಗೂ ಬಿ.ಬಿ.ಎಂ./ಬಿ.ಬಿ.ಎ. ಕೋರ್ಸುಗಳಲ್ಲಿ ವಾರಕ್ಕೆ 16 ಗಂಟೆಗಳು ಹಾಗೂ ಪ್ರಾಯೋಗಿಕ ತರಗತಿಗಳ ವಿಜ್ಞಾನ ಕೋರ್ಸುಗಳಲ್ಲಿ ವಾರಕ್ಕೆ 20 ಗಂಟೆಗಳ ಬೋಧನಾ ಕಾರ್ಯಭಾರವನ್ನು ಕಡ್ಡಾಯವಾಗಿ ಹಂಚಿಕೆ ಮಾಡುವುದು. ಖಾಯಂ ಉಪನ್ಯಾಸಕರುಗಳಿಗೆ ನಿಯಮಾನುಸಾರ ಕಾರ್ಯಭಾರ ಹಂಚಿಕೆ ಮಾಡಿರುವ ಬಗ್ಗೆ ಪ್ರಾಂಶುಪಾಲರು ಹಾಗೂ ಸಂಬಂಧಪಟ್ಟ ಜಂಟಿ ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು. ಈ ರೀತಿ ಕಾರ್ಯಭಾರವನ್ನು ಹಂಚಿಕೆ ಮಾಡಿ, ಆನಂತರವೂ ಬೋಧನಾ ಕಾರ್ಯಭಾರ ಉಳಿಕೆ ಇದ್ದಲ್ಲಿ ಮಾತ್ರ ಅಗತ್ಯಕ್ಕನುಗುಣವಾಗಿ ಅರ್ಹ ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ **Online** ಮೂಲಕ ಪಾರದರ್ಶಕವಾಗಿ ನಿಗದಿತ ಮಾನದಂಡಗಳನ್ವಯ ಆಯ್ಕೆ ಮಾಡಿಕೊಳ್ಳುವುದು.

ಉಪನಿರ್ದೇಶಕರು
ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ
ಶಿವಮೊಗ್ಗ-577203

K. Sailatha
Principal
PES Institute of Advanced Management Studies
NH 206, Sagar Road
SHIVAMOGGA-577 204

ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಶಿವಮೊಗ್ಗ-577203

**ಅತಿಥಿ ಉಪನ್ಯಾಸಕರುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಕಾಲೇಜಿನ ಪ್ರಾಂಶುಪಾಲರು/ಆಯ್ಕೆ ಸಮಿತಿಯು ಅನುಸರಿಸಬೇಕಾದ ಮಾನದಂಡಗಳು;**

(1) ಆನ್‌ಲೈನ್ ಮೂಲಕ ಪಡೆದ ಅರ್ಜಿಗಳಲ್ಲಿನ ವಿವರಗಳನ್ನು ಆಧರಿಸಿ, ವಿದ್ಯಾರ್ಹತೆ ಮತ್ತು ಸೇವಾ ಅನುಭವವನ್ನು ಪರಿಗಣಿಸಲು ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಿ ಪ್ರತಿಭಾ ಪಟ್ಟಿಯನ್ನು (Merit List) ಸಿದ್ಧಪಡಿಸಿಕೊಂಡು ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವುದು.

| ಕ್ರಮ ಸಂಖ್ಯೆ | ವಿದ್ಯಾರ್ಹತೆ | ಗರಿಷ್ಠ ಅಂಕಗಳು |
|---|---|---|
| 1) | <u>ಸಾಮಾನ್ಯ ವಿದ್ಯಾರ್ಹತೆ:</u><br>ಅಭ್ಯರ್ಥಿಯು ಎರಡು ವರ್ಷ ಸ್ನಾತಕೋತ್ತರ ಪದವಿಯಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ 35%ನ್ನು ಗಣನೆಗೆ ತೆಗೆದುಕೊಳ್ಳುವುದು.<br>(ಉದಾ: ಅಭ್ಯರ್ಥಿಯು ಸ್ನಾತಕೋತ್ತರ ಪದವಿಯಲ್ಲಿ ಶೇಕಡ 60 ಅಂಕ ಪಡೆದಿದ್ದಲ್ಲಿ ಅದರ ಶೇಕಡ 35ರಷ್ಟು ಭಾಗವನ್ನು ಅಂದರೆ 21 ಅಂಕಗಳು ಎಂಬುದಾಗಿ ಗಣನೆಗೆ ತೆಗೆದುಕೊಳ್ಳುವುದು). | 35 |
| 2) | (1) ಪಿಹೆಚ್.ಡಿ ವಿದ್ಯಾರ್ಹತೆ ಪಡೆದಿದ್ದಲ್ಲಿ<br>(2) ಎನ್‌ಇಟಿ/ಕೆ–ಸೆಟ್/ಎಸ್‌ಎಲ್‌ಇಟಿ ವಿದ್ಯಾರ್ಹತೆ ಪಡೆದಿದ್ದಲ್ಲಿ<br>(3) ಎಂ.ಫಿಲ್. ವಿದ್ಯಾರ್ಹತೆ ಪಡೆದಿದ್ದಲ್ಲಿ | 15<br>12<br>08 |
| 3) | ಹಿಂದಿನ ವರ್ಷಗಳಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಅವಧಿಗೆ ಪ್ರತಿ ಶೈಕ್ಷಣಿಕ ವರ್ಷಕ್ಕೆ 3 ಅಂಕಗಳಂತೆ ಗರಿಷ್ಠ 10 ವರ್ಷಗಳಿಗೆ 30 ಅಂಕಗಳನ್ನು ಮಿತಿಗೊಳಿಸುವುದು.<br>(ಪ್ರತಿ ಶೈಕ್ಷಣಿಕ ವರ್ಷದ ಪೂರ್ಣ ಅವಧಿ ಸೇವೆಗೆ 3 ಅಂಕಗಳು, ಶೈಕ್ಷಣಿಕ ವರ್ಷದಲ್ಲಿ 1 ಸೆಮಿಸ್ಟರ್‌ನಲ್ಲಿ ಮಾತ್ರ ಸೇವೆ ಸಲ್ಲಿಸಿದ್ದರೆ 1.5 ಅಂಕಗಳು) | 30 |
| | ಒಟ್ಟು | 100 |

**ಸೂಚನೆ: ವಿಕಲಚೇತನ ಅಭ್ಯರ್ಥಿಗಳಿಗೆ 10 ಅಂಕಗಳನ್ನು ಹೆಚ್ಚುವರಿಯಾಗಿ ನೀಡುವುದರೊಂದಿಗೆ ಅವರನ್ನು ಆಯ್ಕೆ ಸಂದರ್ಭದಲ್ಲಿ ಆದ್ಯತೆ ಮೇರೆಗೆ ಪರಿಗಣಿಸುವುದು.**

(2) ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಅಭ್ಯರ್ಥಿಗಳು M.Phil/Ph.D ಪದವಿಯನ್ನು ದೂರ ಶಿಕ್ಷಣದ (Distance Education) ಮೂಲಕ ಪಡೆದಿದ್ದಲ್ಲಿ ಅದನ್ನು ದಿನಾಂಕ: 31.05.2017ರ ಯುಜಿಸಿ ಪ್ರಕಟಣೆ ಸಂಖ್ಯೆ: ಎಫ್ ನಂ.4–1/2016(ಡಿಇಬಿ/III)ರ ಪ್ರಕಾರ ಪರಿಗಣಿಸತಕ್ಕದಲ್ಲ ಹಾಗೂ ನಕಲಿ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳನ್ನು ಆಯ್ಕೆಗೆ ಪರಿಗಣಿಸುವಂತಿಲ್ಲ.

(3) ಒಂದು ವೇಳೆ ಅತಿಥಿ ಉಪನ್ಯಾಸಕರು ಪಡೆದಿರುವ ವಿದ್ಯಾರ್ಹತೆಯ ಅಂಕಪಟ್ಟಿಗಳು/ಪ್ರಮಾಣ ಪತ್ರಗಳು ನಕಲಿ ಎಂದು ಕಂಡುಬಂದಲ್ಲಿ ಅಂತಹವರ ವಿರುದ್ಧ ಸಂಬಂಧಪಟ್ಟ ಪ್ರಾಂಶುಪಾಲರು ಕ್ರಿಮಿನಲ್ ಕೇಸ್ ದಾಖಲಿಸುವಂತೆ ಹಾಗೂ ಅತಿಥಿ ಉಪನ್ಯಾಸಕರ ಶೈಕ್ಷಣಿಕ ದಾಖಲೆಗಳು ನಕಲಿ ಎಂದು ಕಂಡಬಂದಲ್ಲಿ ಅವರ ವಿರುದ್ಧ ಶಿಸ್ತು ಕ್ರಮಕ್ಕೆಗೊಳ್ಳಬಹುದೆಂದು ಅವರಿಂದ ಆಯ್ಕೆ ವೇಳೆ ರೂ.50/–ಗಳ ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಪತ್ರ ಬರೆಸಿಕೊಳ್ಳುವಂತೆಯೂ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

Principal
PES Institute of Advanced Management Studies
NH 206, Sagar Road
SHIVAMOGGA-577 204

ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಶಿವಮೊಗ್ಗ-577203

(4) ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ, ದಿನಾಂಕ:31.05.2017ರ ಯುಜಿಸಿ ಪ್ರಕಟಣೆ ಸಂಖ್ಯೆ:ಎಫ್ ನಂ.4-1/2016(ಡಿಇಬಿ/III)ರಲ್ಲಿ ತಿಳಿಸಿರುವಂತೆ ಪಿಹೆಚ್.ಡಿ ಪದವಿಯ ಬಗ್ಗೆ ಪರಿಶೀಲಿಸತಕ್ಕದ್ದು.

(5) ಎನ್.ಇ.ಟಿ/ಎಸ್‌ಎಲ್‌ಇಟಿ/ಪಿಹೆಚ್‌ಡಿ ವಿದ್ಯಾರ್ಹತೆಯನ್ನು ಹೊಂದಿಲ್ಲದಿರುವ ಅಭ್ಯರ್ಥಿಗಳು ದಿನಾಂಕ:11.07.2009 ರ ಒಳಗೆ ಎಂ.ಫಿಲ್ ಪದವಿಯನ್ನು ಪಡೆದಿದ್ದಲ್ಲಿ ಮಾತ್ರ ಅದನ್ನು ಪರಿಗಣಿಸುವುದು.

(6) ಅಭ್ಯರ್ಥಿಗಳು ಆನ್-ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯನ್ನು ಮಾತ್ರ ಪರಿಗಣಿಸತಕ್ಕದ್ದು. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಅವಧಿಯ ನಂತರ ಪಡೆದಿರುವ ಹೆಚ್ಚುವರಿ ವಿದ್ಯಾರ್ಹತೆಗಳಾದ ಪಿ.ಹೆಚ್.ಡಿ, ಎನ್.ಇ.ಟಿ., ಮತ್ತು ಎಸ್.ಎಲ್.ಇ.ಟಿ. ಪದವಿಗಳನ್ನು ಆ ಶೈಕ್ಷಣಿಕ ವರ್ಷದಲ್ಲಿ (ಸೇವಾವಧಿಯ ಮಧ್ಯದಲ್ಲಿ) ಪರಿಗಣಿಸಿ, ಗೌರವಧನ ಪರಿಷ್ಕರಿಸಲು ಅವಕಾಶವಿರುವುದಿಲ್ಲ.

(7) ಪ್ರಾಂಶುಪಾಲರುಗಳು ಸಂಬಂಧಪಟ್ಟ ವಿಷಯ ಹಾಗೂ ಸರ್ಕಾರ ಅಧಿಸೂಚಿಸಿರುವ ಸಮಾನಾಂತರ ವಿಷಯಗಳನ್ನು ಮಾತ್ರ ಪರಿಗಣಿಸಿ, ಅತಿಥಿ ಉಪನ್ಯಾಸಕರ ಆಯ್ಕೆಯನ್ನು ಮಾಡುವುದು.

(8) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರು/ಬೋಧಕರಿಗೆ ನಿಗಧಿತ ಬೋಧನಾ ಕಾರ್ಯಭಾರವಿಲ್ಲದೇ ವರ್ಗಾವಣೆ/ನಿಯೋಜನೆ ಕೋರಿ ಬಹಳಷ್ಟು ಮನವಿಗಳು ಸರ್ಕಾರ/ಇಲಾಖೆಯಲ್ಲಿ ಸ್ವೀಕೃತವಾಗುತ್ತಿರುವ ಹಿನ್ನೆಲೆಯಲ್ಲಿ ಬಿ.ಎ. ಬಿ.ಕಾಂ. ಹಾಗೂ ಬಿ.ಬಿ.ಎಂ./ಬಿ.ಬಿ.ಎ. ಕೋರ್ಸುಗಳಲ್ಲಿ ವಾರಕ್ಕೆ 16 ಗಂಟೆಗಳು ಹಾಗೂ ವಿಜ್ಞಾನ ವಿಭಾಗದಲ್ಲಿ ವಾರಕ್ಕೆ 20 ಗಂಟೆಗಳ ನಿಗಧಿತ ಕಾರ್ಯಭಾರವಿಲ್ಲದ ಬೋಧಕರಿಗೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಲೇಜಿನೊಂದಿಗೆ ಕೊರತೆ ಕಾರ್ಯಭಾರವಿರುವ ಸಮೀಪದ ಕಾಲೇಜುಗಳಿಗೆ ನಿಯೋಜಿಸಲು ಪ್ರಾಂಶುಪಾಲರುಗಳು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಅಂತಹ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಕಾಲೇಜುವಾರು ಕ್ರೋಢಿಕರಿಸಿ, ಸ್ಪಷ್ಟ ಅಭಿಪ್ರಾಯದೊಂದಿಗೆ ತಕ್ಷಣವೇ ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದು.

(9) ಅತಿಥಿ ಉಪನ್ಯಾಸಕರುಗಳಿಗೆ ನಿಗಧಿಪಡಿಸಿರುವ ಬೋಧನಾ ಕಾರ್ಯಭಾರದ ವಿವರ ಮತ್ತು ಅದನ್ನು ನಿರ್ವಹಿಸಿರುವ ಬಗ್ಗೆ (ವೇಳಾ ಪಟ್ಟಿಯೊಂದಿಗೆ) ಸಂಬಂಧ ಪಟ್ಟ ವಿಭಾಗದ ಮುಖ್ಯಸ್ಥರು, ಪ್ರತಿ ತಿಂಗಳು ಪ್ರಾಂಶುಪಾಲರಿಗೆ ನೀಡತಕ್ಕದ್ದು. ವಿಭಾಗದಲ್ಲಿ/ವಿಷಯದಲ್ಲಿ ಖಾಯಂ ಉಪನ್ಯಾಸಕರು ಇಲ್ಲದಿದ್ದಲ್ಲಿ ಪ್ರಾಂಶುಪಾಲರೇ ವರದಿಯನ್ನು ಸಿದ್ದಪಡಿಸುವುದು. ಸದರಿ ವರದಿ ಹಾಗೂ ಹಾಜರಾತಿಯನ್ನು ಪ್ರಾಂಶುಪಾಲರು ಕ್ರೋಢಿಕರಿಸಿ ಪ್ರತಿ ತಿಂಗಳು ಅತಿಥಿ ಉಪನ್ಯಾಸಕರ ಅನುಮೋದನಾ ಪ್ರಾಧಿಕಾರವಾದ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

(10) ಪೂರ್ಣಕಾಲಿಕ ಉಪನ್ಯಾಸಕರಿಗೆ ಹಂಚಿಕೆ ಮಾಡಿದ ನಂತರ ಉಳಿಯುವ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳುವುದರಿಂದ ಸದರಿ ಸೇವೆಯನ್ನು ಖಾಯಂ ಉಪನ್ಯಾಸಕರ ಹುದ್ದೆಯ ನೇಮಕಾತಿಯಲ್ಲಿ ಅರ್ಹತೆ ನೀಡಲು ಪರಿಗಣಿಸುವುದಿಲ್ಲ. ಹಾಗೂ ಈ ಬಗ್ಗೆ ಕೃಪಾಂಕ ಕೋರಲು ಯಾವುದೇ ಹಕ್ಕು ಇರುವುದಿಲ್ಲವೆಂದು ಸೂಚಿಸಿದೆ.

Principal
PES Institute of Advanced Management Studies
NH 206, Sagar Road
SHIVAMOGGA-577 204

ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಚೇರಿ
ಶಿವಮೊಗ್ಗ-577203

(11) ಅತಿಥಿ ಉಪನ್ಯಾಸಕರನ್ನು ಆಯಾ ವಿಶ್ವವಿದ್ಯಾಲಯಗಳ **Calendar of Events** ಪ್ರಕಾರ ಕಾಲೇಜುಗಳಲ್ಲಿ ತರಗತಿಗಳು ಪ್ರಾರಂಭವಾದ ನಂತರ ಅತಿಥಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿಕೊಂಡು, ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಅನ್ವಯಿಸುವಂತೆ ವರ್ಷಕ್ಕೆ ಗರಿಷ್ಠ 10 ತಿಂಗಳ ಅವಧಿಗೆ (ಬೇಸಿಗೆ ರಜೆ ಹೊರತುಪಡಿಸಿ) ಮಾತ್ರ ಆಯ್ಕೆ ಮಾಡಿಕೊಳ್ಳಲು ಸೂಚಿಸಲಾಗಿದೆ.

(12) ಹೊಸ ನೇಮಕಾತಿ/ವರ್ಗಾವಣೆ/ನಿಯೋಜನೆ ಹಾಗೂ ಇನ್ನಿತರ ಕಾರಣದಿಂದಾಗಿ ಖಾಯಂ ಉಪನ್ಯಾಸಕರು ಕಾಲೇಜಿನಲ್ಲಿ ಕರ್ತವ್ಯಕ್ಕೆ ಹಾಜರಾದಾಗ ಉಂಟಾಗುವ ಕೊರತೆ ಕಾರ್ಯಭಾರಕ್ಕೆ ಪ್ರಸ್ತುತ 2019-20ನೇ ಸಾಲಿನ ಪ್ರತಿಭಾ ಪಟ್ಟಿಯಲ್ಲಿ (Merit List) ಕಡಿಮೆ ಅಂಕ ಪಡೆದಿರುವ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಬಿಡುಗಡೆಗೊಳಿಸುವುದು.

(13) ಅತಿಥಿ ಉಪನ್ಯಾಸಕರುಗಳು ತಾತ್ಕಾಲಿಕವಾಗಿ ಆಯ್ಕೆಗೊಂಡು ಕರ್ತವ್ಯ ನಿರ್ವಹಿಸುವುದರಿಂದ, ಅವರುಗಳಿಗೆ ಗೌರವಧನವನ್ನು ಹೊರತುಪಡಿಸಿ ಪೂರ್ಣಕಾಲಿಕ ಸಿಬ್ಬಂದಿಗಳಿಗೆ ಇರುವಂತೆ ಯಾವುದೇ ರಜೆ ಅಥವಾ ಇನ್ನಿತರೆ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ.

(14) ಮಹಿಳಾ ಅತಿಥಿ ಉಪನ್ಯಾಸಕರು ಪ್ರಸೂತಿ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರ ಕಾರ್ಯಕ್ಕೆ ಗೈರು ಹಾಜರಾದ ಸಂದರ್ಭದಲ್ಲಿ ಅವರ ಕಾರ್ಯವನ್ನು ನಿರ್ವಹಿಸಲು ಬೇರೊಬ್ಬ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿದೆ. ಆದರೆ ಮಹಿಳಾ ಅತಿಥಿ ಉಪನ್ಯಾಸಕರು ಪ್ರಸೂತಿಯಿಂದ ಹಿಂದಿರುಗಿದಲ್ಲಿ ಅವರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರನ್ನು ಸೇವೆಯಿಂದ ಕೈಬಿಟ್ಟು ಪುನಃ ಅದೇ ಮಹಿಳಾ ಅಭ್ಯರ್ಥಿಯನ್ನೇ ಮುಂದುವರೆಸಿ ಅವರ ಸೇವೆಯನ್ನು ಅದೇ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಬಳಸಿಕೊಳ್ಳಲು ಸೂಚಿಸಲಾಗಿದೆ.

(15) ಶೈಕ್ಷಣಿಕ ವರ್ಷದ ಮಧ್ಯ ಭಾಗದಲ್ಲಿ ಖಾಯಂ ಅಧ್ಯಾಪಕರುಗಳು ವರ್ಗಾವಣೆ/ನಿಯೋಜನೆ/ವಯೋನಿವೃತ್ತಿ/ಸ್ವಯಂ ನಿವೃತ್ತಿ/ಹೊಸ ನೇಮಕಾತಿ ಹಾಗೂ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳು ವಿವಿಧ ಕಾರಣಗಳಿಂದ ಕರ್ತವ್ಯದಿಂದ ಬಿಡುಗಡೆ ಹೊಂದಿದಲ್ಲಿ ಸದರಿ ಕಾರ್ಯಭಾರವನ್ನು ನಿರ್ವಹಿಸಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರುವವರನ್ನೇ ಪ್ರತಿಭಾ ಪಟ್ಟಿಯ ಆಧಾರದ ಮೇಲೆ ಅತಿಥಿ ಉಪನ್ಯಾಸಕರಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು.

ಮುಂದುವರೆದು, ಸಂಬಂಧಪಟ್ಟ ವಿಷಯದ ಪ್ರತಿಭಾ ಪಟ್ಟಿಯಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಥವಾ ನಿರಾಕರಿಸಿದಲ್ಲಿ ಆನ್-ಲೈನ್ ಮೂಲಕ ಇತರೆ ಸರ್ಕಾರಿ ಕಾಲೇಜುಗಳಿಗೆ ಅರ್ಜಿಯನ್ನು ಸಲ್ಲಿಸಿರುವ ಅಭ್ಯರ್ಥಿಗಳನ್ನು (Application ID ಹೊಂದಿರುವ) ಅರ್ಹತೆ ಮೇರೆಗೆ ನಿಯಮಾನುಸಾರ ಆಯ್ಕೆ ಮಾಡಿಕೊಳ್ಳುವುದು. ಈ ರೀತಿ ಆಯ್ಕೆ ಮಾಡಿಕೊಂಡ ಅತಿಥಿ ಉಪನ್ಯಾಸಕರ ಅನುಮೋದನೆಗಾಗಿ ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರಿಗೆ ನಿಯಮಾನುಸಾರ ಪ್ರಸ್ತಾವನೆ ಸಲ್ಲಿಸುವುದು.

K. Sailatha
Principal
PES Institute of Advanced Management Studies
NH 206, Sagar Road
SHIVAMOGGA-577 204

. . . . . 6

ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಶಿವಮೊಗ್ಗ-577203

(16) ಒಂದು ವೇಳೆ ಯಾವುದೇ ಕಾಲೇಜಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆನ್‌ಲೈನ್‌ನಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿಯೇ ಅರ್ಹ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿಯನ್ನು ಪಡೆದು, ನಿಯಮಾನುಸಾರ ನಿಗದಿಪಡಿಸಿರುವ ಮಾನದಂಡಗಳನ್ವಯ ಪ್ರಾಂಶುಪಾಲರ ಹಂತದಲ್ಲಿ ಆಯ್ಕೆ ಮಾಡಿಕೊಂಡು, ಅನುಮೋದನೆಗಾಗಿ/ಐ.ಡಿ. ಕ್ರಿಯೇಟ್‌ಗಾಗಿ ಸದರಿ ಅಭ್ಯರ್ಥಿಯ ವಿವರಗಳೊಂದಿಗೆ ಶೈಕ್ಷಣಿಕ ವರ್ಷದ ಮಧ್ಯ ಭಾಗದಲ್ಲಿ ಆಯ್ಕೆ ಮಾಡಿಕೊಂಡಿರುವ ಬಗ್ಗೆ ಸೂಕ್ತ ಕಾರಣ ಮತ್ತು ಅಗತ್ಯ ದಾಖಲೆಗಳ ಸಮೇತ ಪ್ರಸ್ತಾವನೆಯನ್ನು ವಿಳಂಬ ಮಾಡದೆ 01 ತಿಂಗಳೊಳಗಾಗಿ ಕಡ್ಡಾಯವಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

ಕಾಲೇಜು ಶಿಕ್ಷಣ ಆಯುಕ್ತರು

ಇವರಿಗೆ,

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2) ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಮಾಹಿತಿ & ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು – ಅಗತ್ಯ ಕ್ರಮಕ್ಕಾಗಿ ಮತ್ತು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

ಪ್ರತಿಯನ್ನು:

1) ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು.
2) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
3) ಜಂಟಿ ನಿರ್ದೇಶಕರು (ಶೈಕ್ಷಣಿಕ), ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
4) ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಶಾಖೆಗೆ.
5) ಮ್ಯಾನೇಜರ್/ಅಧೀಕ್ಷಕರು, ವರ್ಗಾವಣೆ & ನಿಯೋಜನೆ ವಿಭಾಗ, ಯೋಜನೆ/ಆಯವ್ಯಯ ವಿಭಾಗ, ಶೈಕ್ಷಣಿಕ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
6) ಕಛೇರಿ ಪ್ರತಿ.

Principal
PES Institute of Advanced Management Studies
NH 206, Sagar Road
SHIVAMOGGA-577 204

ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಶಿವಮೊಗ್ಗ-577203